**ಅ. ದಾ. ಸಂ. ಃ 279/2023**
**ಪಿ.ಡಬ್ಲ್ಯೂ ಃ 01**

**ದಿನಾಂಕ ಃ 03.02.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ– ವಾದಿಯ ಪರ ಶ್ರೀ. ASS. ವಕೀಲರಿಂದ** ಃ–

ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಪ್ರಮಾಣಪತ್ರದಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರವನ್ನು ವಕೀಲರಿಗೆ ನಾನು ಹೇಳಿ ಬರೆಯಿರುತ್ತೇನೆ. ದಾವೆಗೆ ಸಂಬಂಧಪಟ್ಟಂತೆ ಕೆಲವು ದಾಖಲೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನನ್ನ ಪರವಾಗಿ ಗುರುತಿಸಲು ಕೇಳಿಕೊಳ್ಳುತ್ತೇನೆ.

ವಂಶವೃಕ್ಷ ಪ್ರಮಾಣಪತ್ರ ಹಾಜರು ಪಡಿಸಿದ್ದು ನಿಪಿ–1 ಎಂದು ಗುರುತಿಸಲಾಯಿತು. ಸರ್ವೆ ನಂ.65 ರ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿದ್ದು ನಿಪಿ–2 ಎಂದು ಗುರುತಿಸಲಾಯಿತು. ಅಸಲು ದಾವೆ ನಂ . 98/13 ರ ಧೃಡೀಕೃತ ನಕಲಿನ ಆದೇಶದ ಪ್ರತಿಗಳನ್ನು ಹಾಜರು ಪಡಿಸಿದ್ದು ನಿಪಿ–3 ಎಂದು ಗುರುತಿಸಲಾಯಿತು. ಅಸಲು ದಾವೆ ನಂ .98/2013 ರ ಧೃಡೀಕೃತ ನಕಲಿನ ವಾದಪತ್ರ ಹಾಗೂ ಪ್ರತಿವಾದಪತ್ರವನ್ನು ಹಾಜರು ಪಡಿಸಿದ್ದು ನಿಪಿ–4 ಮತ್ತು ನಿಪಿ–5 ಎಂದು ಗುರುತಿಸಲಾಯಿತು. ಅಸಲು ದಾವೆ ನಂ 98/2013 ರ ಧೃಡೀಕೃತ ನಕಲಿನ ತೀರ್ಪು ಮತ್ತು ಡಿಕ್ರಿಯನ್ನು ಹಾಜರು ಪಡಿಸಿದ್ದು ನಿಪಿ– 6 ಎಂದು ಗುರುತಿಸಲಾಯಿತು. ಸರ್ವೆ ನಂ.5/13 ರ ಧೃಡೀಕೃತ ನಕಲಿನ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿದ್ದು ನಿಪಿ–7 ಎಂದು ಗುರುತಿಸಲಾಯಿತು. ಧೃಡೀಕೃತ ನಕಲಿನ ನೋಟಿಫಿಕೇಶನ್ ದಿನಾಂಕ 21.02.1983 ಅನ್ನು ಹಾಜರು ಪಡಿಸಿದ್ದು ನಿಪಿ–8 ಎಂದು ಗುರುತಿಸಲಾಯಿತು. ಧೃಡೀಕೃತ ನಕಲಿನ ಗ್ರಾಂಟ್ ಸರ್ಟಿಫಿಕೇಟ್ ಹಾಜರು ಪಡಿಸಿದ್ದು ನಿಪಿ–9 ಎಂದು ಗುರುತಿಸಲಾಯಿತು. ಧೃಡೀಕೃತ ನಕಲಿನ ವಂಶವೃಕ್ಷ ಪತ್ರವನ್ನು ಹಾಜರು ಪಡಿಸಿದ್ದು ನಿಪಿ–10 ಎಂದು ಗುರುತಿಸಲಾಯಿತು. ತಹಸಿಲ್ದಾರ್ ಮಾಗಡಿ ರವರಿಗೆ ನೀಡಿದ ಧೃಡೀಕೃತ

ನಕಲಿನ ಅರ್ಜಿಯನ್ನು ಹಾಜರು ಪಡಿಸಿದ್ದು ನಿಪಿ–11 ಮತ್ತು ನಿಪಿ–12 ಎಂದು ಗುರುತಿಸಲಾಯಿತು. ಧೃಡೀಕೃತ ನಕಲಿನ ಮ್ಯುಟೇಷನ್ ಹಾಜರು ಪಡಿಸಿದ್ದು ನಿಪಿ–13 ಎಂದು ಗುರುತಿಸಲಾಯಿತು. ಧೃಡೀಕೃತ ನಕಲಿನ ಆರ್ ಆರ್ ಟಿ ನಂ .54/2012–13 ರ ಆದೇಶದ ಪ್ರತಿಗಳನ್ನು ಹಾಜರು ಪಡಿಸಿದ್ದು ನಿಪಿ–14 ಎಂದು ಗುರುತಿಸಲಾಯಿತು. ಉಪತಹಸಿಲ್ದಾರ್ ರವರ ಆದೇಶದ ಧೃಡೀಕೃತ ನಕಲನ್ನು ಹಾಜರು ಪಡಿಸಿದ್ದು ನಿಪಿ–15 ಎಂದು ಗುರುತಿಸಲಾಯಿತು. ಕುದೂರು ಪೋಲಿಸ್ ಠಾಣೆಯವರು ನೀಡಿದ ಸ್ವೀಕೃತಿ ಮತ್ತು ಹಿಂಬರಹವನ್ನು ಹಾಜರು ಪಡಿಸಿದ್ದು ನಿಪಿ–16 ಮತ್ತು ನಿಪಿ–17 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ **ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ, ಸಮಯ ನೀಡಿ ಮುಂದುವರೆದ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ಸಿ. ಜ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**